**ಕರ್ನಾಟಕ ಸರ್ಕಾರ**

**ಆಯುಕ್ತರ ಕಛೇರಿ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

**ತಾಂತ್ರಿಕ ಶಿಕ್ಷಣ ಇಲಾಖೆಯ ನಡವಳಿಗಳು**

**ವಿಷಯ:** ತಾಂತ್ರಿಕ ಶಿಕ್ಷಣ ಇಲಾಖೆಯ ಉಳಿದ ಮೂಲ ವೃಂದ ಮತ್ತು ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದಲ್ಲಿ ಖಾಲಿಯಿರುವ ಕಾರ್ಯಾಗಾರ ವಿಭಾಗದ ಶಿಕ್ಷಕರ(ಇನ್‌ಸ್ಟ್ರಕ್ಟರ್)(ಗಣಕಯಂತ್ರ ವಿಜ್ಞಾನ ವಿಭಾಗ) ಮುಂಬಡ್ತಿ ಹುದ್ದೆಗಳನ್ನು ಸಹ ಶಿಕ್ಷಕರ(ಅಸಿಸ್ಟೆಂಟ್ ಇನ್‌ಸ್ಟ್ರಕ್ಟರ್) (ಗಣಕಯಂತ್ರ ವಿಜ್ಞಾನ ವಿಭಾಗ) ವೃಂದದಿಂದ ಮುಂಬಡ್ತಿ ಮೂಲಕ ತುಂಬುವ ಬಗ್ಗೆ.

**ಉಲ್ಲೇಖ:**
1. ಈ ಕಛೇರಿ ಅಧಿಸೂಚನೆ ಸಂಖ್ಯೆ: ಡಿಟಿಇ 09 ಇಎಸ್‌ಟಿ(3) 2019, ದಿನಾಂಕ: 03.08.2019 ರಲ್ಲಿ ಪ್ರಕಟಿಸಲಾಗಿರುವ ತಾಂತ್ರಿಕ ಶಿಕ್ಷಣ ಇಲಾಖೆಯ ಸಹ ಶಿಕ್ಷಕರ(ಗಣಕಯಂತ್ರ ವಿಜ್ಞಾನ ವಿಭಾಗ) ವೃಂದದ ಅಂತಿಮ ಜೇಷ್ಠತಾ ಪಟ್ಟಿ
2. ದಿನಾಂಕ: 24.08.2022 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡವಳಿಗಳು.
3. ಈ ಕಛೇರಿ ಜ್ಞಾಪನ ಸಂಖ್ಯೆ: DTE-ADMIOEST(4)/14/2021(ಭಾಗ), ದಿನಾಂಕ: 30.08.2022

*****

**ಪ್ರಸ್ತಾವನೆ:**

ತಾಂತ್ರಿಕ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಕಾರ್ಯಾಗಾರ ವಿಭಾಗದಲ್ಲಿನ ವಿವಿಧ ವಿಭಾಗಗಳ ಶಿಕ್ಷಕರು(ಇನ್‌ಸ್ಟ್ರಕ್ಟರ್) ಹುದ್ದೆಗಳಿಗೆ ಆಯಾ ವಿಭಾಗದ ಸಹ ಶಿಕ್ಷಕರು (ಅಸಿಸ್ಟೆಂಟ್ ಇನ್‌ಸ್ಟ್ರಕ್ಟರ್) ಹುದ್ದೆಯಿಂದ ಶೇಕಡ 50 ರಷ್ಟು ಹುದ್ದೆಗಳನ್ನು ಬಡ್ತಿ ಮೂಲಕ ತುಂಬಲು ಅವಕಾಶ ಕಲ್ಪಿಸಲಾಗಿರುತ್ತದೆ. ಉಲ್ಲೇಖ(1) ರಂತೆ ಪ್ರಕಟಿಸಲಾಗಿರುವ ತಾಂತ್ರಿಕ ಶಿಕ್ಷಣ ಇಲಾಖೆಯ ಸಹ ಶಿಕ್ಷಕರ(ಗಣಕಯಂತ್ರ ವಿಜ್ಞಾನ ವಿಭಾಗ) ವೃಂದದ ಅಂತಿಮ ಜ್ಯೇಷ್ಠತಾ ಪಟ್ಟಿಯ ಅನುಸಾರ ಕಾರ್ಯಾಗಾರ ವಿಭಾಗದ ಶಿಕ್ಷಕರ(ಇನ್‌ಸ್ಟ್ರಕ್ಟರ್)(ಗಣಕಯಂತ್ರ ವಿಜ್ಞಾನ ವಿಭಾಗ) ವೃಂದದಲ್ಲಿ ಖಾಲಿಯಿರುವ ಮುಂಬಡ್ತಿ ಹುದ್ದೆಗಳನ್ನು ಮುಂಬಡ್ತಿ ಮೂಲಕ ತುಂಬಬೇಕಾಗಿರುತ್ತದೆ. ಈ ಸಂಬಂಧ ದಿನಾಂಕ: 24.08.2022 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ಖಾಲಿಯಿರುವ ಶಿಕ್ಷಕರ(ಇನ್‌ಸ್ಟ್ರಕ್ಟರ್)(ಗಣಕಯಂತ್ರ ವಿಜ್ಞಾನ ವಿಭಾಗ) ಮುಂಬಡ್ತಿ ಹುದ್ದೆಗಳನ್ನು ಜೇಷ್ಠತೆ, ಅರ್ಹತೆ, ಮೀಸಲಾತಿ ನಿಯಮಗಳ ಆಧಾರದ ಮೇಲೆ ಅರ್ಹ ಸಹ ಶಿಕ್ಷಕರು(ಗಣಕಯಂತ್ರ ವಿಜ್ಞಾನ ವಿಭಾಗ) ಗಳಿಗೆ ಮುಂಬಡ್ತಿ ನೀಡಲು ತೀರ್ಮಾನಿಸಿ, ಸದರಿ ಅರ್ಹ ಸಹ ಶಿಕ್ಷಕರುಗಳಿಗೆ ಮುಂಬಡ್ತಿ ನೀಡಲು ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡವಳಿಯಲ್ಲಿ ಶಿಫಾರಸ್ಸು ಮಾಡಲಾಗಿದೆ.

ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನ ಹಾಗೂ ಶಿಫಾರಸ್ಸಿನಂತೆ ಸಹ ಶಿಕ್ಷಕರ(ಗಣಕಯಂತ್ರ ವಿಜ್ಞಾನ ವಿಭಾಗ) ವೃಂದದಿಂದ ಶಿಕ್ಷಕರ(ಗಣಕಯಂತ್ರ ವಿಜ್ಞಾನ ವಿಭಾಗ) ವೃಂದಕ್ಕೆ ಬಡ್ತಿ ಹೊಂದಲು ಅರ್ಹರಿರುವ ಸಹ ಶಿಕ್ಷಕರುಗಳಿಗೆ ಮುಂಬಡ್ತಿ ಹುದ್ದೆಯಲ್ಲಿ ಸ್ಥಳನಿಯುಕ್ತಿಗೊಳಿಸುವ ಸಲುವಾಗಿ 03 ಸ್ಥಳಗಳನ್ನು ಸೂಚಿಸಲು ಉಲ್ಲೇಖ(3) ರಲ್ಲಿ ಅವಕಾಶ ಕಲ್ಪಿಸಲಾಗಿತ್ತು. ಅದರಂತೆ ಸ್ಥಳ ಸೂಚಿಸಿರುವ ಸಹ ಶಿಕ್ಷಕರುಗಳಿಗೆ ಶಿಕ್ಷಕರ ಹುದ್ದೆಗೆ ಸ್ಥಾನಪನ್ನ ಬಡ್ತಿ ನೀಡಿ ಸ್ಥಳನಿಯುಕ್ತಿ ಆದೇಶ ಹೊರಡಿಸಬೇಕಾಗಿರುವುದರಿಂದ, ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: DTE-ADMIOEST(4)/14/2021(ಭಾಗ)/658 ದಿನಾಂಕ: 02.09.2022

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ತಾಂತ್ರಿಕ ಶಿಕ್ಷಣ ಇಲಾಖೆಯ ಈ ಕೆಳಕಂಡ ಸಹ ಶಿಕ್ಷಕರು(ಗಣಕಯಂತ್ರ ವಿಜ್ಞಾನ ವಿಭಾಗ)ಗಳಿಗೆ ಗ್ರೂಪ್-ಸಿ ವೃಂದದ ರಾಜ್ಯ ವೇತನ ಶ್ರೇಣಿ ರೂ. 33450-850-36000-950-39800-1100-46400-1250-53900-1450-62600 ರಲ್ಲಿನ ಶಿಕ್ಷಕರ (ಗಣಕಯಂತ್ರ ವಿಜ್ಞಾನ ವಿಭಾಗ) ಹುದ್ದೆಗೆ ತಾತ್ಕಾಲಿಕವಾಗಿ ಹಾಗೂ ಮುಂದಿನ ಆದೇಶದವರೆಗೆ ಸ್ಥಾನಪನ್ನ ಬಡ್ತಿ ನೀಡಿ ಅವರ ಹೆಸರಿನ ಮುಂದೆ ಸೂಚಿಸಿರುವ ಖಾಲಿ ಹುದ್ದೆಗೆ ಎದುರಾಗಿ ಶೈಕ್ಷಣಿಕ ಹಿತದೃಷ್ಟಿಯಿಂದ ಸ್ಥಳನಿಯುಕ್ತಿಗೊಳಿಸಿ ಆದೇಶಿಸಿದೆ.

**ಉಳಿದ ಮೂಲ ವೃಂದ**

| ಕ್ರ ಸಂ | ಸಹ ಶಿಕ್ಷಕರ ಹೆಸರು | ಕಾರ್ಯನಿರ್ವಹಿಸುತ್ತಿರುವ ಕಛೇರಿ / ಸಂಸ್ಥೆ | ಶಿಕ್ಷಕರ ಹುದ್ದೆಗೆ ಸ್ಥಾನಪನ್ನ ಬಡ್ತಿ ನೀಡಿ ಸ್ಥಳನಿಯುಕ್ತಿಗೊಳಿಸಲಾದ ಸಂಸ್ಥೆ |
|---|---|---|---|
| 1. | ಭರತ್‌ಕುಮಾರ್ ಎನ್. | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು | ಸರ್ಕಾರಿ ಪಾಲಿಟೆಕ್ನಿಕ್, ರಾಮನಗರ |
| 2. | ಅನಘ ಬಿಜಾಪುರ | ಸರ್ಕಾರಿ ಪಾಲಿಟೆಕ್ನಿಕ್, ಹುಬ್ಬಳ್ಳಿ | ಸರ್ಕಾರಿ ಪಾಲಿಟೆಕ್ನಿಕ್, ಹುಬ್ಬಳ್ಳಿ |
| 3. | ವಾಮನರಾವ್ | ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್, ಮೈಸೂರು | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಚಾಮರಾಜನಗರ |
| 4. | ಗಜರಾಜ್ ಎಂ. | ಎಸ್.ಜೆ. ಸರ್ಕಾರಿ ಪಾಲಿಟೆಕ್ನಿಕ್, ಬೆಂಗಳೂರು | ಎಸ್.ಕೆ.ಎಸ್.ಜೆ.ಟಿ.ಸಂಸ್ಥೆ, ಬೆಂಗಳೂರು |
| 5. | ಗೋವಿಂದರಾಜು ಡಿ.ಎಲ್. | ಸರ್ಕಾರಿ ಪಾಲಿಟೆಕ್ನಿಕ್, ಹರಿಹರ | ಸರ್ಕಾರಿ ಪಾಲಿಟೆಕ್ನಿಕ್, ಹರಿಹರ |
| 6. | ಭರತ್ ಎಲ್.ಕಲಾಲ್ | ಸರ್ಕಾರಿ ಪಾಲಿಟೆಕ್ನಿಕ್, ಝಳಕಿ | ಸರ್ಕಾರಿ ಪಾಲಿಟೆಕ್ನಿಕ್, ವಿಜಯಪುರ |
| 7. | ಕವಿತ ಹೆಚ್.ಎನ್. | ಸರ್ಕಾರಿ ಪಾಲಿಟೆಕ್ನಿಕ್, ಬಾಗೇಪಲ್ಲಿ | ಸರ್ಕಾರಿ ಪಾಲಿಟೆಕ್ನಿಕ್, ಮುಳಬಾಗಿಲು |
| 8. | ಕಲಾವತಿ ಡಿ. | ಸರ್ಕಾರಿ ಪಾಲಿಟೆಕ್ನಿಕ್, ಅರಕೆರೆ(ಶ್ರೀರಂಗಪಟ್ಟಣ) | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಕೆ.ಆರ್.ಪೇಟೆ |
| 9. | ರಾಜಾಪುರ ದೀಪ | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಮಂಗಳೂರು | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹಾಸನ |
| 10. | ಡಿ.ಟಿ.ಕೃಷ್ಣಮೂರ್ತಿ | ಸರ್ಕಾರಿ ಮಹಿಳಾ ವಸತಿ ಪಾಲಿಟೆಕ್ನಿಕ್, ಶಿವಮೊಗ್ಗ | ಸರ್ಕಾರಿ ಪಾಲಿಟೆಕ್ನಿಕ್, ಸೊರಬ |

**ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದ**

| ಕ್ರ ಸಂ | ಸಹ ಶಿಕ್ಷಕರ ಹೆಸರು | ಕಾರ್ಯನಿರ್ವಹಿಸುತ್ತಿರುವ ಕಛೇರಿ / ಸಂಸ್ಥೆ | ಶಿಕ್ಷಕರ ಹುದ್ದೆಗೆ ಸ್ಥಾನಪನ್ನ ಬಡ್ತಿ ನೀಡಿ ಸ್ಥಳನಿಯುಕ್ತಿಗೊಳಿಸಲಾದ ಸಂಸ್ಥೆ |
|---|---|---|---|
| 1. | ರಾಜಶ್ರೀ ಆರ್. | ಸರ್ಕಾರಿ ಪಾಲಿಟೆಕ್ನಿಕ್, ಕಲಬುರಗಿ | ಸರ್ಕಾರಿ ಪಾಲಿಟೆಕ್ನಿಕ್, ಕಾಳಗಿ |

ಮುಂಬಡ್ತಿ ಹೊಂದಿದ ಸಿಬ್ಬಂದಿಗಳು ಸ್ಥಾನಪನ್ನ ಮುಂಬಡ್ತಿ ಹುದ್ದೆಯಲ್ಲಿ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 19(ಸಿ)ರ ಪ್ರಕಾರ ಒಂದು ವರ್ಷದ ಸ್ಥಾನಪನ್ನ ಅವಧಿಯನ್ನು ತೃಪ್ತಿಕರವಾಗಿ ಪೂರೈಸುವ ಷರತ್ತಿಗೊಳಪಟ್ಟಿದೆ.

ಬಡ್ತಿ ಹೊಂದಿರುವ ಸಹ ಶಿಕ್ಷಕರುಗಳು ಆದೇಶದ ಪ್ರತಿಯನ್ನು ಇಲಾಖಾ ವೆಬ್‌ಸೈಟ್‌ನಿಂದ ಪಡೆದು ಸ್ಥಳನಿಯುಕ್ತಿಗೊಳಸಲಾದ ಸಂಸ್ಥೆಯಲ್ಲಿ ಈ ಆದೇಶ ತಲುಪಿದ 15 ದಿನಗಳೊಳಗಾಗಿ ಕರ್ತವ್ಯಕ್ಕೆ ಹಾಜರಾಗಿ ವರದಿ ಮಾಡಿಕೊಳ್ಳತಕ್ಕದ್ದು, ತಪ್ಪಿದಲ್ಲಿ ಬಡ್ತಿಯು ಸ್ವಯಂಚಾಲಿತವಾಗಿ ರದ್ದಾಗುತ್ತದೆ

ಬಡ್ತಿ ಹೊಂದಿರುವ ಸಹ ಶಿಕ್ಷಕರುಗಳ ಪೈಕಿ ಯಾರಾದರೂ ಪ್ರಸ್ತುತ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದಲ್ಲಿ, ಸದರಿ ನಿಯೋಜನೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿದೆ.

**ಆಯುಕ್ತರು,**
**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,**
ಬೆಂಗಳೂರು

**ಇವರಿಗೆ:-**

1. ಸಂಬಂಧಪಟ್ಟ ಸಹ ಶಿಕ್ಷಕರುಗಳಿಗೆ(ಸಂಬಂಧಿಸಿದ ಪ್ರಾಂಶುಪಾಲರ ಮೂಲಕ);
2. ಸಂಬಂಧಪಟ್ಟ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು / ಪಾಲಿಟೆಕ್ನಿಕ್‌ಗಳು / ಕಿರಿಯ ತಾಂತ್ರಿಕ ಶಾಲೆಗಳ ಪ್ರಾಂಶುಪಾಲರುಗಳಿಗೆ - ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ;
3. ತಾಂತ್ರಿಕ ಶಿಕ್ಷಣ ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ;
4. ನೋಡಲ್ ಅಧಿಕಾರಿ, ಇ-ಆಡಳಿತ ವಿಭಾಗ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು(ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು).

**ಪ್ರತಿ:-**

1. ಆಪ್ತ ಶಾಖೆ, ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು;
2. ಶಾಖಾ ರಕ್ಷಾ ಕಡತ.